ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 04.11.2023.

**ಪಾಟೀ ಸವಾಲು: ಎದುರುದಾರ ಪರ ವಕೀಲರಿಂದ:**

ನಾನು ಎದುರುದಾರಳ ಜೊತೆ ಮದುವೆಯಾದ ನಂತರ ತಲೆಕುಣಿ ಗ್ರಾಮದಲ್ಲಿ ಸುಮಾರು 1 ತಿಂಗಳ ಕಾಲ ಇದ್ದೇ, ನಂತರ ನಾನು ಬೆಂಗಳೂರಿಗೆ ಹೋದೇವು. ಬೆಂಗಳೂರಿನಲ್ಲಿ ನಾನು ಮತ್ತು ಎದುರುದಾರಳು ಇಬ್ಬರು ಕೂಡಿ ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇವು. ನಾನು ಮತ್ತು ಎದುರುದಾರಳು ಬಾಡಿಗೆ ಮನೆಯಲ್ಲಿ ಸಂಸಾರ ಮಾಡಿಕೊಂಡು ಇದ್ದೇವು ಎಂದರೆ ಸರಿ. ನನ್ನ ತಂದೆ ಬೆಂಗಳೂರಿಗೆ ಬರುತ್ತಿದ್ದರು ಎಂದರೆ ಸಾಕ್ಷಿ ಅವಶ್ಯಕತೆ ಇದ್ದಾಗ ನನ್ನ ತಂದೆ-ತಾಯಿ ಬಂದು ಹೋಗಿ ಮಾಡುತ್ತಿದ್ದರ ಎಂದು ನುಡಿಯುತ್ತಾರೆ. ನಾವು ಬೆಂಗಳೂರಿನಲ್ಲಿ ಇದ್ದಾಗ ನಮ್ಮ ತಂದೆ-ತಾಯಿ ಎಷ್ಟು ಬಾರಿ ಬೆಂಗಳೂರಿಗೆ ಬಂದು ಹೋಗಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ನನ್ನ ತಂದೆ ನಾವು ಬೆಂಗಳೂರಿಗೆ ಹೋದನಂತರ 3-4 ತಿಂಗಳಿಗೆ ಬಂದು ಹೋಗಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಮತ್ತು ಎದುರುದಾರಳು ನಮ್ಮ ಮದುವೆಯಾಗುವ ಮುಂಚೆನೇ ನನ್ನ ತಂದೆಗೆ ಇಬ್ಬರು ನೌಕರಿ ಮಾಡುವುದು ಗೊತ್ತಿತ್ತು ಎಂದರೆ ಸರಿ. ನನ್ನ ತಂದೆ ಬೆಂಗಳೂರಿಗೆ ಬಂದಾಗ ಎದುರುದಾರಳಿಗೆ ಬರುವ ಸಂಭಳದ ಬಗ್ಗೆ ಲೆಕ್ಕ ಇಟ್ಟುಕೊಳ್ಳಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಎದುರುದಾರಳಿಗೆ ಬರುವ ಸಂಭಳ ಮತ್ತು ಖರ್ಚಿನ ಬಗ್ಗೆ ಲೆಕ್ಕಇಟ್ಟುಕೊಳ್ಳಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ಎದುರುದಾರಳು ಆ ರೀತಿ ನಾನು ಲೆಕ್ಕ ಇಡುವುದಿಲ್ಲ, ತನ್ನ ಸಂಭಳವನ್ನು ಸಂಪೂರ್ಣವಾಗಿ ನನ್ನ ಖಾತೆಗೆ ಹಾಕುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಇಷ್ಟಾದರೂ ಕೂಡಾ ನನ್ನ ತಂದೆ ಎದುರುದಾರಳಿಗೆ ಪ್ರತಿ ತಿಂಗಳು ತಮ್ಮ ಕೈಯಲ್ಲಿ ಹಣ ಕೊಡಬೇಕು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ಎದುರುದಾರಳು ನನ್ನ ತಂದೆ ಕೈಯಲ್ಲಿ ಕೊಡುವುದು ಹಾಗೂ ನನ್ನ ಖಾತೆಗೆ ಹಾಕುವುದು ಎರಡು ಒಂದೇ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಂದೆ ಹೇಳಿದ ಹಾಗೇ ಕೇಳದೆ ಇರುವ ಕಾರಣ, ನನ್ನ ತಂದೆ ಎದುರುದಾರಳಿಗೆ ಕಿರುಕುಳ ನೀಡಲು ನನಗೆ ಪ್ರಚೋಧನೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಹೇಳಿದ ಮಾತನ್ನು ಚಾಚು ತಪ್ಪದೇ ಪಾಲಿಸುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮಾತು ಏಕೆ ಕೇಳುವುದಿಲ್ಲ ಎಂದು ನಾನು ಎದುರುದಾರಳಿಗೆ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಅದೇ ರೀತಿ ಎದುರುದಾರಳ ಹತ್ತಿರ ಇರುವ ಬಂಗಾರವನ್ನು ನನ್ನ ತಂದೆಯ ಕೈಯಲ್ಲಿ ಕೊಟ್ಟಿಲ್ಲ ಎಂದು ನಾನು ಎದುರುದಾರಳಿಗೆ ಬೈದಿರುತ್ತೇನೆ ಎಂದರೆ ಸರಿಯಲ್ಲ. ಯಾವತ್ತು ಎದುರುದಾರಳು ನನ್ನ ಮಾತನ್ನಾಗಲಿ ಅಥವಾ ನನ್ನ ತಂದೆಯ ಮಾತನ್ನಾಗಲಿ ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಇಬ್ಬರು ಕೂಡಿ ಎದುರುದಾರಳಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈಗಲಾದರೂ ಎದುರುದಾರಳು ನಾನು ಹೇಳಿದಂತೆ ಕೇಳಲು ಹಾಗೂ ನನ್ನ ತಂದೆ ಹೇಳಿದಂತೆ ಸಂಭಳವನ್ನು ನನ್ನ ತಂದೆ ಕೈಯಲ್ಲಿಯಾಗಲಿ, ನನ್ನ ಕೈಯಲ್ಲಿಯಾಗಲಿ ಕೊಡಲು ತಯಾರಿರುತ್ತಾಳೆ ಎಂದರೆ ಸರಿಯಲ್ಲ.

ಎದುರುದಾರಳ ಸಹೋದರನಾದ ವಿಜಯಕುಮಾರ ರವರು ಬೆಂಗಳೂರಿನಲ್ಲಿ ಇಂಜಿನಿಯರ್ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನಮ್ಮ ಜೊತೆ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಎದುರುದಾರಳು ಬೆಂಗಳೂರಿನಲ್ಲಿ

ಇದ್ದಾಗ, ಎದುರುದಾರಳ ಸಹೋದರ ನಮ್ಮ ಜೊತೆ ಯಾವತ್ತು ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರಳು ಸಹೋದರ ನಮ್ಮ ಜೊತೆ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಎದುರುದಾರಳು ಇರುವ ಬಾಡಿಗೆ ಮನೆಯಲ್ಲಿ ನಾನು ಎದುರುದಾರಳಿಗೆ ಹೇಳದೇ ಮನೆಯಲ್ಲಿರುವ ಸಾಮಾನುಗಳನ್ನು ತೆಗೆದುಕೊಂಡು ಹಾಗೂ ಬಾಡಿಗೆ ಮನೆಗೆ ನೀಡಿದ ಮುಂಗಡ ಕೂಡಾ ಪಡೆದುಕೊಂಡು ಎದುರುದಾರಳನ್ನು ಅದೇ ಬಾಡಿಗೆ ಮನೆಯಲ್ಲಿ ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ರೀತಿ ನಾನು ಮೂರು ಬಾರಿ ಹಾಗೇ ಮನೆ ಬಿಟ್ಟು ಮತ್ತು ಎದುರುದಾರಳನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸಾಕ್ಷಿ ನನಗೆ ಎದುರುದಾರಳ ಸಹೋದರನಿಂದ ಹಾಗೂ ಆತನ ಸಹಚರರಿಂದ ಜೀವ ಬೆದರಿಕೆ ಇತ್ತು ಆ ಕಾರಣ ಎದುರುದಾರಳನ್ನು ಕರೆದುಕೊಂಡು ಮನೆ ಬಿಟ್ಟು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ಎದುರುದಾರಳನ ಸಹೋದರನ ಮೇಲೆ ದೂರು ಸಲ್ಲಿಸಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ, ಆದರೆ ವನಿತಾ ಸಹಾಯವಾಣಿ ಕಮೀಷನರ್ ಕಛೇರಿಗೆ ದೂರು ಕೊಟ್ಟಿರುತ್ತೇನೆ. ಆ ರೀತಿ ನಾನು ಎದುರುದಾರಳನ್ನು ಬಿಟ್ಟು ಹೋಗಿದ್ದಕ್ಕೆ ಅನಿರ್ವಾಯವಾಗಿ ಎದುರುದಾರಳು ವನಿತಾ ಸಹಾಯವಾಣಿ ಕಮೀಷನರ್ ಕಛೇರಿಯಲ್ಲಿ ನನ್ನ ವಿರುದ್ಧ ದೂರು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಕೇಂದ್ರದವರು ನಮ್ಮಿಬ್ಬರನ್ನು ಕರೆಯಿಸಿ ಕೌನ್ಸಲಿಂಗ್ ಮಾಡಿರುತ್ತಾರೆ ಎಂದರೆ ಸರಿ.

ಎದುರುದಾರಳು ನನ್ನ ಜೊತೆ ಯಾವಾಗಲೂ ಸಹಕಾರದಿಂದ ಇದ್ದಳು ಎಂದರೆ ಸರಿಯಲ್ಲ. ಎದುರುದಾರಳು ನನ್ನನ್ನು ಪಸಂದ ಮಾಡಲ್ಲ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಆ ರೀತಿ ವನಿತಾ ಸಹಾಯವಾಣಿ ಕಮೀಷನರ್ ಕಛೇರಿಯವರು

ನನಗೆ ಮತ್ತು ಎದುರುದಾರಳಿಗೆ ಸಾಕಷ್ಟು ತಿಳಿ ಹೇಳಿದರೂ ಕೂಡಾ ನಾನು ಎದುರುದಾರಳಿಗೆ ಕಿರುಕುಳ ನೀಡುವುದನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಿವೃತ್ತ ನೌಕರ. ನನ್ನ ತಾಯಿ ಮತ್ತು ತಂದೆ ಕೆಲಒಂದಿಷ್ಟು ದಿವಸ ನಮ್ಮ ಜೊತೆ ಬೆಂಗಳೂರಿನಲ್ಲಿ ಇದ್ದರು ಹಾಗೂ ತಲೆಕುಣಿಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಂದೆ ನಿವೃತ್ತ ಹೊಂದಿದ ನಂತರ ಬಿ.ಆರ್. ಪಾಟೀಲ್ ಬ್ಯಾಂಕಿನಲ್ಲಿ ಸ್ವಲ್ಪ ದಿವಸ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

ನನ್ನ ತಾಯಿ ನನ್ನ ತಂದೆ ಜೊತೆ ಕಲಬುರಗಿಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಯ ಆರೋಗ್ಯ ಚೆನ್ನಾಗಿದೆ ಎಂದರೆ ಸರಿ. ನನ್ನ ತಾಯಿಗೆ 2019 ರಲ್ಲಿ ಆರೋಗ್ಯ ಚೆನ್ನಾಗಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಎದುರುದಾರಳು ನನ್ನ ತಾಯಿಯನ್ನು ನೋಡಿಕೊಳ್ಳುವುದು ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಆದೇ ಕಾರಣದಿಂದ ನಾನು ಎದುರುದಾರಳಿಗೆ ನಿನ್ನ ನೌಕರಿಗೆ ರಾಜಿನಾಮೆ ಕೊಡು ಎಂದು ಒತ್ತಾಯ ಮಾಡಿ ಹಾಗೂ ಊರಲ್ಲಿ ಇರು ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ.

ನಾನು ಎಂದೂ ಎದುರುದಾರಳನ್ನು ಕರೆದುಕೊಂಡು ನನ್ನ ತಂದೆ ತಾಯಿ ಇರುವ ಜಾಗಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಕೋವಿಡ್-19 ಇದ್ದಾಗ ನಾನು ಊರಲ್ಲಿ ಬಂದು ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆಗ ನಾನು ಎದುರುದಾರಳನ್ನು ಕರೆದುಕೊಂಡು ಬಂದಿಲ್ಲ, ಏಕೆಂದರೆ ಅವಳು ನನ್ನ ಜೊತೆ ಬರಲಿಲ್ಲ. ಎದುರುದಾರಳು ನನ್ನ ಜೊತೆ ಬರಲು ಒಪ್ಪಿಕೊಂಡರೂ ಕೂಡಾ ನಾನು ಅವಳನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಎದುರುದಾರಳಿಗೆ ನನ್ನ ಜೊತೆ ವೈವಾಹಿಕ ಜೀವನ ನಡೆಸಲು ಇಚ್ಛೆ ಇದ್ದು, ಈಗಲೂ ಕೂಡಾ ತಯಾರಿರುತ್ತಾಳೆ ಎಂದರೆ ಸರಿಯಲ್ಲ. ನನಗೂ ಕೂಡಾ ಎದುರುದಾರಳು

ಜೊತೆ ಬಾಳ್ವೆ ಮಾಡಲು ಇಚ್ಛೆ ಇದ್ದು, ಆದರೆ ನನ್ನ ತಂದೆ-ತಾಯಿ ಮಾತು ಕೇಳಿ ನಾನು ಬಾಳ್ವೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ಸಾಕಷ್ಟು ಬಾರಿ ಪಂಚಾಯತಿ ರವರು ನನಗೆ ಮತ್ತು ನನ್ನ ತಂದೆಗೆ ತಿಳುವಳಿಕೆ ಹೇಳಿದರೂ ಕೂಡಾ ನಾವು ಅವರ ಮಾತನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಎದುರುದಾರಳ ಜೀವನವನ್ನು ಹಾಳು ಮಾಡಬೇಕೆಂಬ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**